57) ತುಮಕೂರಿನಿಂದ ದೊಡ್ಡ ಬಂಗೇರಿ

58) ತುಮಕೂರಿನಿಂದ ಚಿತ್ರದುರ್ಗ

59) ತಿಮ್ಮನಹಳ್ಳಿಯಿಂದ ತುಮಕೂರು

60) ಬಡವನಹಳ್ಳಿಯಿಂದ ಶಿವಮೊಗ್ಗ

61) ಶಿರಾದಿಂದ ನಿಟ್ಟೂರು ಮತ್ತು ಹಿಂದಕ್ಕೆ

62) ಶಿರಾದಿಂದ ಬೆಂಗಳೂರು

63) ಶಿರಾದಿಂದ ತಿಪಟೂರು

64) ತುಮಕೂರಿನಿಂದ ಹಿರಿಯೂರು

65) ತುಮಕೂರಿನಿಂದ ಹಿರಿಯೂರು

66) ಬೆಂಗಳೂರಿನಿಂದ

67) ಚಳ್ಳಿರೆ ಇಂದ ಸಿ.ಎನ್. ಹಳ್ಳಿ

68) ಪರಶುರಾಮಪುರದಿಂದ ರಾಮನಗರ

69) ಕಸಿನಾಯಕನಹಳ್ಳಿ ಇಂದ ಮಧುಗಿರಿ

70) ಕುಣಿಗಲ್‌ನಿಂದ ಹೊನಗೊಂಡನಹಳ್ಳಿ

71) ಹೊಸದುರ್ಗದಿಂದ ಗೌರಿಬಿದನೂರು

72) ಪರಶುರಾಮಪುರದಿಂದ ಸಿರಾ

ಹೊಸ ಜಿಲ್ಲೆಗಳನ್ನು ರಚನೆಗೆ ಕೈಗೊಂಡ ಕ್ರಮ

2394 - ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ದೊಡ್ಡ ಜಿಲ್ಲೆಗಳನ್ನು ವಿಂಗಡಿಸಿ ಆಡಳಿತದ ಅನುಕೂಲಕ್ಕಾಗಿ ಹೊಸ ಜಿಲ್ಲೆಗಳನ್ನು ರಚಿಸಲು ಈವರೆವಿಗೂ ಕೈಗೊಂಡ ಕ್ರಮಗಳು ಯಾವುವು?

ಆ) 3 ಸಮಿತಿಗಳ ವರದಿಗಳಲ್ಲಿ ಸವಿಸ್ತಾರ ವಿವರಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಶಿಫಾರಸ್ ಮಾಡಿದಂತಹ ಹೊಸ ಜಿಲ್ಲೆಗಳು ಯಾವುವು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್ ವಿಂಗಡಣೆ ಬಗ್ಗೆ ರಚಿಸಲಾಗಿದ್ದ ಶ್ರೀ ವಾಸುದೇವರಾವ್, ಶ್ರೀ ಹುಂಡೇಕರ್ ಹಾಗೂ ಶ್ರೀ ಗದ್ದಿಗೌಡರ್ ಸಮಿತಿಗಳು ವರದಿ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ವಿಷಯವು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ತೋಟಗಾರಿಕೆ ಅಧಿಕಾರಿಗಳ ಕುರಿತು

2389 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿರ್ಸಿಯಲ್ಲಿರುವ ಜಿಲ್ಲಾ ತೋಟಗಾರಿಕೆ ಇಲಾಖೆಯಲ್ಲಿರುವ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಅಧಿಕಾರಿಗಳು ಯಾವ ಯಾವ ಹುದ್ದೆಗಳಲ್ಲಿ ಇರುವರು?

ಇ) ಜಿಲ್ಲಾ ತೋಟಗಾರಿಕೆ ಅಧಿಕಾರಿಗಳ ಸಮನ್ವಯ ಇಲ್ಲದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) 3 (ಮೂರು)

ಆ) 1) ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಸಿರ್ಸಿ

2) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಸಿರ್ಸಿ.

3) ಕೇಂದ್ರ ಕಛೇರಿ ಸಹಾಯಕರು (ಹಿಸತೋನಿ) ಹುದ್ದೆಗೆ ಸಮಾನಾಂತರ ತೋಟಗಾರಿಕೆ ಉಪ ನಿರ್ದೇಶಕರು (ಜಿಪ) ಸಿರ್ಸಿ ಇವರ ಕಛೇರಿ.

ಇ) ಹೌದು.

ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಸಿರ್ಸಿ ಇವರು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲೆಯ ಮೇಲಾಧಿಕಾರಿಗಳಾಗಿರುತ್ತಾರೆ.. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ಕೇಂದ್ರ ಕಛೇರಿ ಸಹಾಯಕರು (ತೋ.ಉ.ಸಿ ಇವರ ಕಛೇರಿ) ಇವರ ಹುದ್ದೆಗಳು ಸಮಾನಾಂತರ ಶ್ರೇಣಿಯಿಂದ ಕೂಡಿರುತ್ತದೆ. ಸಿರ್ಸಿಯಲ್ಲಿನ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯಿತಿ) ಹುದ್ದೆಯು ಅಲ್ಲಿದ್ದ ಅಧಿಕಾರಿಗಳು ನಿವೃತ್ತಿ ಹೊಂದಿದ್ದರಿಂದ ಖಾಲಿಯಾಗಿದ್ದಿತು. ಹಾಗೆ ಖಾಲಿಯಾಗಿದ್ದ ಹುದ್ದೆಗೆ ಅದೇ ಕಛೇರಿಯಲ್ಲ ಕೇಂದ್ರ ಕಛೇರಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದವರನ್ನು ಪ್ರಭಾರದ ಮೇಲೆ ನೇಮಿಸಿ ಕೊಳ್ಳಲಾಯಿತು. ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇತರೆ ಅಧಿಕಾರಿಗಳು ಜೇಷ್ಠತೆಯಲ್ಲಿ ಕಿರಿಯರಾದವರಿಗೆ ಹೆಚ್ಚಿನ ಹುದ್ದೆಯ ಪ್ರಭಾರೆಯನ್ನು ವಹಿಸಿಕೊಟ್ಟಿರುವುದರಿಂದ ಜೇಷ್ಠತೆಯಲ್ಲಿ ಹಿರಿಯರಾದವರಿಗೆ ಕಿರಿಯರ ಕೈಕೆಳಗೆ ಕಾರ್ಯನಿರ್ವಹಿಸಬೇಕಾಗಿರುವುದಾಗಿ ತಿಳಿಯಪಡಿಸಿ ಅವರ ಬದಲಿಗೆ ಜಿಲ್ಲೆಯಲ್ಲಿ ಹಿರಿಯರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಪ್ರಭಾರೆಯನ್ನು ವಹಿಸಿಕೊಡುವಂತೆ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಕರುಗಳು ವಿನಂತಿಸಿದ್ದರು. ಅದರಂತೆ ಈಗ ಜಿಲ್ಲೆಯಲ್ಲಿ ಹಿರಿಯರಾಗಿ ಕಾರ್ಯಹಿಸುತ್ತಿರುವವರಿಗೆ ತೋಟಗಾರಿಕೆ ಉಪ ನಿರ್ದೇಶಕರ ಹುದ್ದೆಯ ಕಾರ್ಯಭಾರ ನಿರ್ವಹಿಸುವ ವ್ಯವಸ್ಥೆ ಮಾಡಲಾಗಿದೆ.

ವ್ಯವಸಾಯ ಮಾರುಕಟ್ಟೆಯ ತೂಕದವರ ನೇಮಕಾತಿ ಹಾಗೂ ವೇತನ ಕುರಿತು.

2365 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಕೆಲಸ ಮಾಡುತ್ತಿರುವ ಒಟ್ಟು ತೂಕದವರು (ವೇಮನ್) ಎಷ್ಟು ಜನ ಇದ್ದಾರೆ? (ಮಾರುಕಟ್ಟೆವಾರು ವಿವರ ನೀಡುವುದು. ಹಾಗೂ ಇವರಿಗೆ ಯಾವ ದರದಲ್ಲಿ ವೇತನ ನೀಡಲಾಗುತ್ತಿದೆ ವಿವರ ಒದಗಿಸುವುದು).

ಆ) ಈ ತೂಕದವರಿಗೆ ಕನಿಷ್ಟವೇತನ ಜಾರಿ ಮಾಡಲು ಯಾವುದಾದರೂ ನ್ಯಾಯಾಲಯ ಆದೇಶ ಜಾರಿ ಮಾಡಿದೆಯೇ.

ಇ) ಕರ್ನಾಟಕ ಉಚ್ಚನ್ಯಾಯಾಲಯ, ಕಾರ್ಮಿಕ ಇಲಾಖೆಗೆ ತಿಂಗಳಿಗೆ ರೂ. 1200-00 ಗಳಂತೆ ಕನಿಷ್ಟ ವೇತನ ನೀಡಬೇಕೆಂದು ಆದೇಶ ನೀಡಿದ್ದರೂ ಈ ಆದೇಶವನ್ನು ಜಾರಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.